# ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006

16.11.2009ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 41ನೇ ಸಂಪುಟದ 1ನೇ ಸಂಚಿಕೆಯಲ್ಲಿ 81 ರಿಂದ 87ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮಗುವಾಗಿರುವ ವಿವಾಹದ ಪಕ್ಷಕಾರನ ಇಚ್ಛೆಯನುಸಾರವಾಗಿ ಬಾಲ್ಯ ವಿವಾಹವು ಶೂನ್ಯಗೊಳಿಸಬಹುದಾದುದು ಆಗಿರುತ್ತದೆ
4. ಬಾಲ್ಯ ವಿವಾಹದ ಪಕ್ಷಕಾರಳಾದ ಮಹಿಳೆಗೆ ಜೀವನಾಂಶ ಮತ್ತು ವಸತಿಗಾಗಿ ಏರ್ಪಾಟು ಮಾಡುವುದು
5. ಬಾಲ್ಯ ವಿವಾಹದ ಮಕ್ಕಳ ಅಭಿರಕ್ಷೆ ಮತ್ತು ಜೀವನಾಂಶ
6. ಬಾಲ್ಯ ವಿವಾಹಗಳಿಂದ ಜನಿಸಿದ ಮಕ್ಕಳ ಔರಸತ್ವ
7. 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶಗಳನ್ನು ಮಾರ್ಪಾಟು ಮಾಡುವುದಕ್ಕೆ ಜಿಲ್ಲಾ ನ್ಯಾಯಾಲಯದ ಅಧಿಕಾರ
8. ಯಾವ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕು
9. ಮಗುವನ್ನು ವಿವಾಹವಾಗುವ ವಯಸ್ಕ ಪುರುಷನಿಗೆ ದಂಡನೆ
10. ಬಾಲ್ಯ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ದಂಡನೆ
11. ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ಉತ್ತೇಜನ ನೀಡುವುದಕ್ಕಾಗಿ ಅಥವಾ ಅನುಮತಿಸುವುದಕ್ಕಾಗಿ ದಂಡನೆ
12. ಕೆಲವು ಸನ್ನಿವೇಶಗಳಲ್ಲಿ ಅಪ್ರಾಪ್ತ ವಯಸ್ಕ ಮಗುವಿನ ವಿವಾಹವನ್ನು ಶೂನ್ಯಗೊಳಿಸುವುದು
13. ಬಾಲ್ಯ ವಿವಾಹವನ್ನು ನಿಷೇಧಿಸುವ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದಕ್ಕೆ ನ್ಯಾಯಾಲಯದ ಅಧಿಕಾರ
14. ನಿರ್ಬಂಧಕಾಜ್ಞೆಗಳನ್ನು ಉಲ್ಲಂಘಿಸಿ ನೆರವೇರಿಸಿದ ಬಾಲ್ಯ ವಿವಾಹಗಳು ಶೂನ್ಯವಾಗುವುದು
15. ಅಪರಾಧಗಳು ಸಂಜ್ಞೇಯ ಮತ್ತು ಜಾಮೀನುರಹಿತವಾದವುಗಳು ಆಗಿರುವುದು
16. ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು
17. ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು ಲೋಕನೌಕರರಾಗಿರುವುದು
18. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
19. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ
20. 1955ರ ಅಧಿನಿಯಮ ಸಂಖ್ಯೆ 25ರ ತಿದ್ದುಪಡಿ
21. ನಿರಸನ ಮತ್ತು ಉಳಿಸುವಿಕೆಗಳು

## ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006
## (2007ರ ಅಧಿನಿಯಮ ಸಂಖ್ಯೆ 6)

[ಜನವರಿ 10, 2007]

ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದನ್ನು ನಿಷೇಧಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬಾಲ್ಯ ವಿವಾಹ ನಿಷೇಧ ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ; ಮತ್ತು ಇದು ಭಾರತದ ಹೊರಗೆ ಮತ್ತು ಭಾರತದಾಚೆಗೆ ಇರುವ ಭಾರತದ ಎಲ್ಲ ನಾಗರಿಕರಿಗೆ ಸಹಾ ಅನ್ವಯವಾಗತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದೂ, ಪಾಂಡಿಚೆರಿ ಒಕ್ಕೂಟ ರಾಜ್ಯಕ್ಷೇತ್ರದ ರಿನೋನ್ಸಾರಿಗೆ ಅನ್ವಯಿಸತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಇದು ಜಾರಿಗೆ ಬರತಕ್ಕದ್ದು; ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಯಾವುದೇ ಉಪಬಂಧದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟಂತೆ ಆ ರಾಜ್ಯದಲ್ಲಿ ಆ ಉಪಬಂಧವು ಜಾರಿಗೆ ಬಂದಿರುವುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಗು" ಎಂದರೆ ಗಂಡು ಮಗುವಾಗಿದ್ದರೆ ಇಪ್ಪತ್ತೊಂದು ವರ್ಷ ವಯಸ್ಸನ್ನು ಪೂರ್ಣಗೊಳಿಸಿರದ ಮತ್ತು ಹೆಣ್ಣು ಮಗುವಾಗಿದ್ದರೆ ಹದಿನೆಂಟು ವರ್ಷ ವಯಸ್ಸನ್ನು ಪೂರ್ಣಗೊಳಿಸಿರದ ವ್ಯಕ್ತಿ;

(ಬಿ) "ಬಾಲ್ಯ ವಿವಾಹ" ಎಂದರೆ ಯಾವ ವಿವಾಹದ ಪಕ್ಷಕಾರರಲ್ಲಿ ಒಬ್ಬನಾದರೂ ಮಗುವಾಗಿರುತ್ತಾನೋ ಆ ವಿವಾಹ ಎಂದು ಅರ್ಥ;

(ಸಿ) ವಿವಾಹಕ್ಕೆ ಸಂಬಂಧಿಸಿದಂತೆ, "ವಿವಾಹದ ಪಕ್ಷಕಾರರು" ಎಂದರೆ ಯಾರ ವಿವಾಹವು ಆ ಮೂಲಕ ಶಾಸ್ತ್ರೋಕ್ತವಾಗಿ ನೆರವೇರುತ್ತಿದೆಯೋ ಅಥವಾ ನೆರವೇರಲಿದೆಯೋ ಆ ವಿವಾಹದ ಪಕ್ಷಕಾರರಲ್ಲಿ ಯಾರಾದರೊಬ್ಬ ಪಕ್ಷಕಾರ ಎಂದು ಅರ್ಥ;

(ಡಿ) "ಬಾಲ್ಯ ವಿವಾಹ ನಿಷೇಧ ಅಧಿಕಾರಿ" ಎಂಬುದು 16ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನೇಮಕಗೊಂಡ ಬಾಲ್ಯ ವಿವಾಹ ನಿಷೇಧ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಇ) "ಜಿಲ್ಲಾ ನ್ಯಾಯಾಲಯ" ಎಂದರೆ ಕುಟುಂಬ ನ್ಯಾಯಾಲಯಗಳ ಅಧಿನಿಯಮ, 1984 (1984ರ 66)ರ 3ನೇ ಪ್ರಕರಣದ ಮೇರೆಗೆ ಯಾವ ಪ್ರದೇಶಕ್ಕಾಗಿ ಕುಟುಂಬ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆಯೋ ಆ ಪ್ರದೇಶದಲ್ಲಿರುವಂಥ ಕುಟುಂಬ ನ್ಯಾಯಾಲಯ ಮತ್ತು ಆ ಯಾವುದೇ ಪ್ರದೇಶದಲ್ಲಿ ಕುಟುಂಬ ನ್ಯಾಯಾಲಯವಿಲ್ಲದಿರುವಾಗ ಆದರೆ ಸಿವಿಲ್ ನ್ಯಾಯಾಲಯವಿರುವಲ್ಲಿ ಆ ಸಿವಿಲ್ ನ್ಯಾಯಾಲಯ ಮತ್ತು ಯಾವುದೇ ಇತರ ಪ್ರದೇಶದಲ್ಲಿ ಮೂಲ ಅಧಿಕಾರ ವ್ಯಾಪ್ತಿ ಹೊಂದಿರುವ ಪ್ರಧಾನ ಸಿವಿಲ್ ನ್ಯಾಯಾಲಯ ಎಂದು ಅರ್ಥ ಮತ್ತು ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿ ಹೊಂದಿರುವುದೆಂದು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರೆ ಸಿವಿಲ್ ನ್ಯಾಯಾಲಯವನ್ನೂ ಒಳಗೊಳ್ಳುತ್ತದೆ.

---

* ದಿನಾಂಕ:01.11.2007 ರಿಂದ ಜಾರಿಗೆ ಬಂದಿದೆ. ಎಸ್.ಓ.1850 (ಇ) ದಿನಾಂಕ:30.10.2007ನ್ನು ನೋಡಿ.

(ಎಫ್) "ಅಪ್ರಾಪ್ತ ವಯಸ್ಕ" ಎಂದರೆ ಪ್ರಾಪ್ತ ವಯಸ್ಕತಾ ಅಧಿನಿಯಮ, 1875 (1875ರ 9)ರ ಉಪಬಂಧಗಳ ಮೇರೆಗೆ ಯಾರು ಪ್ರಾಪ್ತ ವಯಸ್ಸನ್ನು ತಲುಪಿಲ್ಲವೆಂದು ಭಾವಿಸಲಾಗುವುದೋ ಆ ವ್ಯಕ್ತಿ.

**3. ಮಗುವಾಗಿರುವ ವಿವಾಹದ ಪಕ್ಷಕಾರನ ಇಚ್ಛೆಯನುಸಾರವಾಗಿ ಬಾಲ್ಯ ವಿವಾಹವು ಶೂನ್ಯಗೊಳಿಸಬಹುದಾದುದು ಆಗಿರುತ್ತದೆ.–** (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಆಗಲಿ ಅಥವಾ ತರುವಾಯವಾಗಲಿ ಶಾಸ್ತ್ರೋಕ್ತವಾಗಿ ನೆರವೇರಿಸಲಾದ ಪ್ರತಿಯೊಂದು ಬಾಲ್ಯ ವಿವಾಹವು, ವಿವಾಹದ ಸಮಯದಲ್ಲಿ, ಮಗುವಾಗಿದ್ದ ವಿವಾಹದ ಪಕ್ಷಕಾರನ ಇಚ್ಛೆಯನುಸಾರವಾಗಿ ಶೂನ್ಯಗೊಳಿಸಬಹುದಾದುದು ಆಗಿರತಕ್ಕದ್ದು:

ಪರಂತು, ಅನೂರ್ಜಿತತೆಯ ಡಿಕ್ರಿ ಮೂಲಕ ಬಾಲ್ಯ ವಿವಾಹವನ್ನು ರದ್ದುಗೊಳಿಸುವುದಕ್ಕಾಗಿನ ಅರ್ಜಿಯನ್ನು, ವಿವಾಹದ ಸಮಯದಲ್ಲಿ ಮಗುವಾಗಿದ್ದ ವಿವಾಹದ ಪಕ್ಷಕಾರನು ಮಾತ್ರ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಬಹುದು.

(2) ಅರ್ಜಿ ಸಲ್ಲಿಸುವ ಸಮಯದಲ್ಲಿ ಅರ್ಜಿದಾರನು ಅಪ್ರಾಪ್ತ ವಯಸ್ಕನಾಗಿದ್ದರೆ ಬಾಲ್ಯ ವಿವಾಹ ನಿಷೇಧ ಅಧಿಕಾರಿಯೊಂದಿಗೆ ಅವನ ಅಥವಾ ಅವಳ ಪೋಷಕರ ಮೂಲಕ ಅಥವಾ ವಾದ ಮಿತ್ರನ ಮೂಲಕ ಅರ್ಜಿ ಸಲ್ಲಿಸಬಹುದು.

(3) ಈ ಪ್ರಕರಣದ ಮೇರೆಗಿನ ಅರ್ಜಿಯನ್ನು ಯಾವುದೇ ಸಮಯದಲ್ಲಿ, ಆದರೆ ಅರ್ಜಿಯನ್ನು ಸಲ್ಲಿಸುವ ಮಗುವು ಪ್ರಾಪ್ತ ವಯಸ್ಕನಾಗಿ ಎರಡು ವರ್ಷಗಳನ್ನು ಪೂರೈಸುವ ಮುಂಚೆ ಸಲ್ಲಿಸಬಹುದು.

(4) ಈ ಪ್ರಕರಣದ ಮೇರೆಗೆ ಅನೂರ್ಜಿತತೆಯ ಡಿಕ್ರಿ ನೀಡುವಾಗ ಜಿಲ್ಲಾ ನ್ಯಾಯಾಲಯವು ವಿವಾಹದ ಎರಡೂ ಪಕ್ಷಕಾರರು ಮತ್ತು ಅವರ ತಂದೆ ತಾಯಂದಿರು ಅಥವಾ ಅವರ ಪೋಷಕರು ಇತರ ಪಕ್ಷಕಾರರಿಗೆ, ಸಂದರ್ಭಾನುಸಾರವಾಗಿ ಅವನ ಅಥವಾ ಅವಳ ತಂದೆ ತಾಯಂದಿರಿಗೆ ಅಥವಾ ಪೋಷಕರಿಗೆ, ಆ ವಿವಾಹದ ಇತರ ಪಕ್ಷಕಾರರಿಂದ ಅವರು ವಿವಾಹದ ಸಮಯದಲ್ಲಿ ಸ್ವೀಕರಿಸಿದ ಹಣವನ್ನು, ಬೆಲೆಬಾಳುವ ವಸ್ತುಗಳನ್ನು, ಆಭರಣಗಳನ್ನು ಮತ್ತು ಇತರ ಕಾಣಿಕೆಗಳನ್ನು ಅಥವಾ ಅಂಥ ಬೆಲೆಬಾಳುವ ವಸ್ತುಗಳ, ಆಭರಣಗಳ, ಇತರ ಕಾಣಿಕೆಗಳ ಮೌಲ್ಯಕ್ಕೆ ಸಮಾನವಾದ ಮೊಬಲಗನ್ನು ಮತ್ತು ಹಣವನ್ನು ಹಿಂದಿರುಗಿಸುವಂತೆ ನಿರ್ದೇಶಿಸಿ ಆದೇಶವನ್ನು ಮಾಡತಕ್ಕದ್ದು:

ಪರಂತು, ಸಂಬಂಧಪಟ್ಟ ಪಕ್ಷಕಾರರಿಗೆ ಜಿಲ್ಲಾ ನ್ಯಾಯಾಲಯದ ಮುಂದೆ ಹಾಜರಾಗುವುದಕ್ಕೆ ಮತ್ತು ಅಂಥ ಆದೇಶವನ್ನು ಯಾಕೆ ಮಾಡಬಾರದು ಎಂಬ ಬಗ್ಗೆ ಕಾರಣ ಕೇಳಿ ನೋಟೀಸ್ ನೀಡಿದ ಹೊರತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**4. ಬಾಲ್ಯ ವಿವಾಹದ ಪಕ್ಷಕಾರಳಾದ ಮಹಿಳೆಗೆ ಜೀವನಾಂಶ ಮತ್ತು ವಸತಿಗಾಗಿ ಏರ್ಪಾಟು ಮಾಡುವುದು.–** (1) 3ನೇ ಪ್ರಕರಣದ ಮೇರೆಗೆ ಡಿಕ್ರಿಯನ್ನು ನೀಡುವಾಗ, ಜಿಲ್ಲಾ ನ್ಯಾಯಾಲಯವು ಬಾಲ್ಯ ವಿವಾಹದ ಪುರುಷ ಪಕ್ಷಕಾರನು ಮತ್ತು ಅಂಥ ವಿವಾಹದ ಪುರುಷ ಪಕ್ಷಕಾರನು ಅಪ್ರಾಪ್ತ ವಯಸ್ಕನಾಗಿರುವಲ್ಲಿ, ಆತನ ತಂದೆ ತಾಯಂದಿರು ಅಥವಾ ಪೋಷಕರು, ವಿವಾಹದ ಪಕ್ಷಕಾರಳಾಗಿರುವ ಮಹಿಳೆಗೆ, ಅವಳು ಪುನರ್ ವಿವಾಹವಾಗುವವರೆಗೆ ಜೀವನಾಂಶವನ್ನು ಸಂದಾಯ ಮಾಡುವಂತೆ ನಿರ್ದೇಶಿಸಿ ಮಧ್ಯಂತರ ಅಥವಾ ಅಂತಿಮ ಆದೇಶವನ್ನೂ ಸಹ ಮಾಡಬಹುದು.

(2) ಜಿಲ್ಲಾ ನ್ಯಾಯಾಲಯವು, ಮಗುವಿನ ಅಗತ್ಯತೆ, ಅವಳ ವಿವಾಹದ ಕಾಲದಲ್ಲಿ ಆ ಮಗು ಅನುಭವಿಸುತ್ತಿದ್ದ ಜೀವನಶೈಲಿ ಮತ್ತು ಸಂದಾಯ ಮಾಡುವ ಪಕ್ಷಕಾರನ ಆದಾಯದ ಮೂಲವನ್ನು ಗಮನದಲ್ಲಿಟ್ಟುಕೊಂಡು ಸಂದಾಯ ಮಾಡಬೇಕಾದ ಜೀವನಾಂಶದ ಪ್ರಮಾಣವನ್ನು ನಿರ್ಧರಿಸತಕ್ಕದ್ದು.

(3) ಜೀವನಾಂಶದ ಪ್ರಮಾಣವನ್ನು ಮಾಸಿಕವಾಗಿ ಅಥವಾ ಒಂದೇ ಮೊತ್ತದಲ್ಲಿ ಸಂದಾಯ ಮಾಡುವುದಕ್ಕೆ ನಿರ್ದೇಶಿಸಬಹುದು.

(4) 3ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಪಕ್ಷವು ಮಹಿಳಾ ಪಕ್ಷಕಾರಳಾಗಿದ್ದ ಸಂದರ್ಭದಲ್ಲಿ, ಜಿಲ್ಲಾ ನ್ಯಾಯಾಲಯವು ಅವಳು ಪುನರ್ ವಿವಾಹವಾಗುವವರೆಗೆ ಅವಳ ವಸತಿಗೆ ಸಂಬಂಧಿಸಿದಂತೆ ಸೂಕ್ತ ಆದೇಶವನ್ನೂ ಸಹ ಮಾಡಬಹುದು.

**5. ಬಾಲ್ಯ ವಿವಾಹದ ಮಕ್ಕಳ ಅಭಿರಕ್ಷೆ ಮತ್ತು ಜೀವನಾಂಶ.–** (1) ಬಾಲ್ಯ ವಿವಾಹದಿಂದ ಮಕ್ಕಳು ಜನಿಸಿದ್ದರೆ, ಜಿಲ್ಲಾ ನ್ಯಾಯಾಲಯವು ಅಂಥ ಮಕ್ಕಳ ಅಭಿರಕ್ಷೆಗಾಗಿ ಸೂಕ್ತ ಆದೇಶವನ್ನು ಮಾಡತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಮಗುವಿನ ಅಭಿರಕ್ಷೆಗೆ ಆದೇಶವನ್ನು ಮಾಡುವಾಗ, ಜಿಲ್ಲಾ ನ್ಯಾಯಾಲಯವು ಮಕ್ಕಳ ಕ್ಷೇಮಾಭಿವೃದ್ಧಿ ಮತ್ತು ಉತ್ತಮ ಹಿತಾಸಕ್ತಿಗಳ ಬಗ್ಗೆ ಪರ್ಯಾಲೋಚಿಸುವುದು ಅತಿಮುಖ್ಯವಾಗಿರತಕ್ಕದ್ದು.

(3) ಮಗುವಿನ ಅಭಿರಕ್ಷೆಯ ಬಗ್ಗೆ ನೀಡಿದ ಆದೇಶವು, ಮಗುವಿನ ಹಿತಾಸಕ್ತಿಗಳನ್ನು ಸರಿಯಾದ ರೀತಿಯಲ್ಲಿ ಕಾಪಾಡಲು ಮಗುವಿನ ಬಳಿಗೆ ಹೋಗುವ ಅವಕಾಶವನ್ನು ಆ ಇತರ ಪಕ್ಷಕಾರನಿಗೆ ಒದಗಿಸುವುದಕ್ಕಾಗಿ ಸೂಕ್ತ ನಿರ್ದೇಶನಗಳನ್ನು ಮತ್ತು ಜಿಲ್ಲಾ ನ್ಯಾಯಾಲಯವು ಮಗುವಿನ ಹಿತದೃಷ್ಟಿಯಿಂದ ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಆದೇಶಗಳನ್ನು ಸಹ ಅದು ಒಳಗೊಳ್ಳಬಹುದು.

(4) ಜಿಲ್ಲಾ ನ್ಯಾಯಾಲಯವು, ವಿವಾಹದ ಪಕ್ಷಕಾರರು ಅಥವಾ ಅವರ ತಂದೆತಾಯಂದಿರು ಅಥವಾ ಪೋಷಕರು ಮಗುವಿಗೆ ಜೀವನಾಂಶವನ್ನು ಒದಗಿಸುವುದಕ್ಕಾಗಿ ಸೂಕ್ತ ಆದೇಶವನ್ನು ಸಹ ಮಾಡಬಹುದು.

**6. ಬಾಲ್ಯ ವಿವಾಹಗಳಿಂದ ಜನಿಸಿದ ಮಕ್ಕಳ ಔರಸತ್ವ.–** 3ನೇ ಪ್ರಕರಣದ ಮೇರೆಗೆ ಅನೂರ್ಜಿತತೆಯ ಡಿಕ್ರಿ ಮೂಲಕ ಬಾಲ್ಯ ವಿವಾಹವನ್ನು ರದ್ದುಗೊಳಿಸಲಾಗಿದ್ದರೂ, ಡಿಕ್ರಿ ಮಾಡುವುದಕ್ಕಿಂತ ಮೊದಲು ಅಂಥ ವಿವಾಹದಿಂದ ಜನಿಸಿದ ಅಥವಾ ಗರ್ಭಾವಸ್ಥೆಯಲ್ಲಿದ್ದ ಪ್ರತಿಯೊಂದು ಮಗುವನ್ನು, ಅದು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಜನಿಸಿರಲಿ ಅಥವಾ ತರುವಾಯವೇ ಜನಿಸಿರಲಿ, ಎಲ್ಲಾ ಉದ್ದೇಶಗಳಿಗಾಗಿ ಅದನ್ನು ಔರಸ ಮಗುವೆಂಬುದಾಗಿ ಭಾವಿಸತಕ್ಕದ್ದು.

**7. 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಆದೇಶಗಳನ್ನು ಮಾರ್ಪಾಟು ಮಾಡುವುದಕ್ಕೆ ಜಿಲ್ಲಾ ನ್ಯಾಯಾಲಯದ ಅಧಿಕಾರ.–** ಜಿಲ್ಲಾ ನ್ಯಾಯಾಲಯವು, ಅರ್ಜಿಯು ಇತ್ಯರ್ಥದಲ್ಲಿರುವ ಯಾವುದೇ ಕಾಲದಲ್ಲಿ, ಸನ್ನಿವೇಶಗಳಲ್ಲಿ ಯಾವುದೇ ಬದಲಾವಣೆಯಾಗಿದ್ದರೆ ಮತ್ತು ಅರ್ಜಿಯು ಅಂತಿಮ ವಿಲೆಯಾದ ನಂತರವೂ ಸಹ 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶಕ್ಕೆ ಸೇರಿಸುವ, ಅದನ್ನು ಮಾರ್ಪಾಟು ಮಾಡುವ ಅಥವಾ ರದ್ದುಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**8. ಯಾವ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕು.–** 3ನೇ, 4ನೇ ಮತ್ತು 5ನೇ ಪ್ರಕರಣಗಳ ಮೇರೆಗೆ ಪರಿಹಾರಗಳನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ, ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯ ಎಂಬುದರಲ್ಲಿ, ಪ್ರತಿವಾದಿಯು ಅಥವಾ ಮಗುವು ವಾಸವಾಗಿರುವ ಸ್ಥಳದ ಅಥವಾ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದ್ದ ಸ್ಥಳದ ಅಥವಾ ವಿವಾಹದ ಪಕ್ಷಕಾರರು ಕೊನೆಯದಾಗಿ ಒಟ್ಟಿಗೆ ವಾಸವಾಗಿದ್ದ ಸ್ಥಳದ ಅಥವಾ ಅರ್ಜಿ ಸಲ್ಲಿಸುವ ದಿನಾಂಕದಂದು ಅರ್ಜಿದಾರನು ವಾಸವಾಗಿರುವ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯವು ಸೇರುತ್ತದೆ.

**9. ಮಗುವನ್ನು ವಿವಾಹವಾಗುವ ವಯಸ್ಕ ಪುರುಷನಿಗೆ ದಂಡನೆ.–** ಬಾಲ್ಯ ವಿವಾಹ ಮಾಡಿಕೊಳ್ಳುವ ಹದಿನೆಂಟು ವರ್ಷ ವಯಸ್ಸು ಮೀರಿದ ಯಾರೇ ವಯಸ್ಕ ಪುರುಷನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**10. ಬಾಲ್ಯ ವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ದಂಡನೆ.–** ಯಾವುದೇ ಬಾಲ್ಯ ವಿವಾಹವನ್ನು ನೆರವೇರಿಸುವ, ನಡೆಸುವ, ನಿರ್ದೇಶಿಸುವ ಅಥವಾ ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು, ಆ ವಿವಾಹವು ಬಾಲ್ಯ ವಿವಾಹವಾಗಿರಲಿಲ್ಲವೆಂದು ನಂಬಲು ತನಗೆ ಕಾರಣಗಳು ಇದ್ದವೆಂದು ಅವನು ರುಜುವಾತುಪಡಿಸಿದ ಹೊರತು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**11. ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ಉತ್ತೇಜನ ನೀಡುವುದಕ್ಕಾಗಿ ಅಥವಾ ಅನುಮತಿಸುವುದಕ್ಕಾಗಿ ದಂಡನೆ.–** (1) ಮಗುವು ಬಾಲ್ಯ ವಿವಾಹವನ್ನು ಮಾಡಿಕೊಂಡರೆ, ತಂದೆ ತಾಯಿಯಾಗಿ ಆಗಲಿ ಅಥವಾ ಪೋಷಕನಾಗಿಯಾಗಲಿ ಅಥವಾ ಇತರ ಯಾರೇ ವ್ಯಕ್ತಿಯಾಗಿ ಆಗಲಿ ಅಥವಾ ಇತರ ಯಾವುದೇ ಸಾಮರ್ಥ್ಯದಲ್ಲಿ ಕಾನೂನುಬದ್ಧವಾಗಿಯಾಗಲಿ ಅಥವಾ ಕಾನೂನಿಗೆ ವಿರುದ್ಧವಾಗಿಯಾಗಲಿ ಮಗುವಿನ ಹೊಣೆ ಹೊಂದಿರುವ, ವಿವಾಹಕ್ಕೆ ಉತ್ತೇಜನ ನೀಡುವಂಥ ಯಾವುದೇ ಕಾರ್ಯ ಮಾಡುವ ಅಥವಾ ಅದು ಶಾಸ್ತ್ರೋಕ್ತವಾಗಿ ನೆರವೇರಲು ಅನುಮತಿಸುವ ಅಥವಾ ಬಾಲ್ಯ ವಿವಾಹದಲ್ಲಿ ಹಾಜರಿರುವುದು ಅಥವಾ ಅದರಲ್ಲಿ ಭಾಗವಹಿಸುವುದೂ ಒಳಗೊಂಡಂತೆ ಅದು ಶಾಸ್ತ್ರೋಕ್ತವಾಗಿ ನೆರವೇರುವುದನ್ನು ತಡೆಯಲು ನಿರ್ಲಕ್ಷ್ಯ ಪೂರ್ವಕವಾಗಿ ತಪ್ಪುವ ಸಂಘ ಸಂಸ್ಥೆಯ ಯಾರೇ ಸದಸ್ಯನೂ ಒಳಗೊಂಡಂತೆ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು:

ಪರಂತು, ಯಾವ ಮಹಿಳೆಯು ಕಾರಾವಾಸದಿಂದ ದಂಡಿತಳಾಗತಕ್ಕದ್ದಲ್ಲ.

(2) ಈ ಪ್ರಕರಣದ ಉದ್ದೇಶಗಳಿಗಾಗಿ, ಅಪ್ರಾಪ್ತ ವಯಸ್ಕ ಮಗುವು ವಿವಾಹ ಮಾಡಿಕೊಂಡಿರುವಲ್ಲಿ, ತದ್ವಿರುದ್ಧವಾದುದನ್ನು ರುಜುವಾತು ಪಡಿಸಿದ ಹೊರತು ಮತ್ತು ರುಜುವಾತುಪಡಿಸುವವರೆಗೆ ಅಂಥ ಅಪ್ರಾಪ್ತ ವಯಸ್ಕ ಮಗುವನ್ನು ತನ್ನ ಬಳಿ ಇಟ್ಟುಕೊಂಡಿರುವ ವ್ಯಕ್ತಿಯು ಆ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರುವುದನ್ನು ತಡೆಯಲು ನಿರ್ಲಕ್ಷ್ಯ ಪೂರ್ವಕವಾಗಿ ತಪ್ಪಿರುವನೆಂದು ಪೂರ್ವ ಭಾವನೆ ಮಾಡತಕ್ಕದ್ದು.

**12. ಕೆಲವು ಸನ್ನಿವೇಶಗಳಲ್ಲಿ ಅಪ್ರಾಪ್ತ ವಯಸ್ಕ ಮಗುವಿನ ವಿವಾಹವನ್ನು ಶೂನ್ಯಗೊಳಿಸುವುದು.–** ಅಪ್ರಾಪ್ತ ವಯಸ್ಕ ಮಗುವನ್ನು,–

(ಎ) ಕಾನೂನುಬದ್ಧ ಪೋಷಕನ ಬಳಿಯಿಂದ ಕರೆದೊಯ್ದಲ್ಲಿ ಅಥವಾ ಆತನ ಬಳಿಯಿಂದ ಪುಸಲಾಯಿಸಿ ಕರೆದುಕೊಂಡು ಹೋಗಿರುವಲ್ಲಿ; ಅಥವಾ

(ಬಿ) ಬಲವಂತವಾಗಿ ಒತ್ತಾಯ ಮಾಡಿ ಅಥವಾ ಯಾವುದೇ ಮೋಸದ ವಿಧಾನದಿಂದ ಯಾವುದೇ ಸ್ಥಳದಿಂದ ಹೊರಹೋಗುವಂತೆ ಪ್ರೇರೇಪಿಸಿದಲ್ಲಿ; ಅಥವಾ

(ಸಿ) ವಿವಾಹದ ಉದ್ದೇಶಕ್ಕಾಗಿ ಮಾರಾಟ ಮಾಡಿದಲ್ಲಿ; ಮತ್ತು ಯಾವುದೇ ರೀತಿಯಲ್ಲಿ ವಿವಾಹವಾಗುವಂತೆ ಮಾಡಿದಲ್ಲಿ, ಅಥವಾ ಅಪ್ರಾಪ್ತ ವಯಸ್ಕನಿಗೆ ವಿವಾಹವಾಗಿದ್ದು ಆ ತರುವಾಯ ಆ ಅಪ್ರಾಪ್ತ ವಯಸ್ಕನನ್ನು ಅನೈತಿಕ ಉದ್ದೇಶಗಳಿಗಾಗಿ ಮಾರಾಟ ಮಾಡಿದರೆ, ಅಥವಾ ದುರ್ವ್ಯಾಪಾರಕ್ಕೆ ಒಳಪಡಿಸಿದರೆ ಅಥವಾ ಬಳಸಿಕೊಂಡರೆ

– ಅಂಥ ವಿವಾಹವು ಅಕೃತ ಮತ್ತು ಶೂನ್ಯವಾಗತಕ್ಕದ್ದು.

**13. ಬಾಲ್ಯ ವಿವಾಹವನ್ನು ನಿಷೇಧಿಸುವ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದಕ್ಕೆ ನ್ಯಾಯಾಲಯದ ಅಧಿಕಾರ.–** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಬಾಲ್ಯ ವಿವಾಹ ನಿಷೇಧ ಅಧಿಕಾರಿಯ ಅರ್ಜಿಯ ಮೇಲೆ ಅಥವಾ ಯಾವನೇ ವ್ಯಕ್ತಿಯ ದೂರಿನ ಮುಖಾಂತರ ಅಥವಾ ಅನ್ಯಥಾ ಪಡೆದ ಮಾಹಿತಿಯ ಮೇಲೆ, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಮಹಾನಗರ ಮ್ಯಾಜಿಸ್ಟ್ರೇಟನಿಗೆ ಈ ಅಧಿನಿಯಮವನ್ನು ಉಲ್ಲಂಘಿಸಿ ಬಾಲ್ಯ ವಿವಾಹ ಏರ್ಪಾಡು ಮಾಡಲಾಗಿದೆಯೆಂದು ಅಥವಾ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರಲಿರುವುದೆಂದು ಮನದಟ್ಟಾದರೆ, ಅಂಥ ಮ್ಯಾಜಿಸ್ಟ್ರೇಟನು ಅಂಥ ವಿವಾಹವನ್ನು ನಿಷೇಧಿಸಿ ಯಾವುದೇ ಸಂಘಟನೆಯ ಅಥವಾ ವ್ಯಕ್ತಿಗಳ ಸಂಘದ ಸದಸ್ಯನೂ ಸೇರಿದಂತೆ ಯಾವನೇ ವ್ಯಕ್ತಿಯ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದು.

(2) ಬಾಲ್ಯ ವಿವಾಹವನ್ನು ಅಥವಾ ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವ ಸಾಧ್ಯತೆಗೆ ಸಂಬಂಧಿಸಿದಂತೆ ತನಗೆ ತಿಳಿದ ಅಥವಾ ನಂಬಲು ಕಾರಣವನ್ನು ಹೊಂದಿರುವ ಯಾವನೇ ವ್ಯಕ್ತಿಯು ಮತ್ತು ಯುಕ್ತ ಮಾಹಿತಿಯನ್ನು ಹೊಂದಿರುವ ಸರ್ಕಾರೇತರ ಸಂಸ್ಥೆಯು (1)ನೇ ಉಪ ಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಬಹುದು.

(3) ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅಥವಾ ಮಹಾನಗರ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಯಾವುದೇ ನಂಬಲರ್ಹ ವರದಿಯ ಅಥವಾ ಮಾಹಿತಿಯ ಆಧಾರದ ಮೇಲೆ ತಾನಾಗಿಯೇ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು.

(4) ಅಕ್ಷಯ ತೃತೀಯದಂತಹ ಕೆಲವು ದಿನಗಳಂದು ಸಾಮೂಹಿಕ ಬಾಲ್ಯ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರುವುದನ್ನು ತಡೆಯುವ ಉದ್ದೇಶಗಳಿಗಾಗಿ, ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಬಾಲ್ಯ ವಿವಾಹ ನಿಷೇಧ ಅಧಿಕಾರಿಗೆ ಪ್ರದತ್ತವಾದಂಥ ಎಲ್ಲಾ ಅಧಿಕಾರಗಳನ್ನು ಹೊಂದಿರುವ ಬಾಲ್ಯ ವಿವಾಹ ನಿಷೇಧ ಅಧಿಕಾರಿಯೆಂದು ಭಾವಿಸತಕ್ಕದ್ದು.

(5) ಜಿಲ್ಲಾ ಮ್ಯಾಜಿಸ್ಟ್ರೇಟನು ಬಾಲ್ಯವಿವಾಹ ಶಾಸ್ತ್ರೋಕ್ತವಾಗಿ ನೆರವೇರುವುದನ್ನು ನಿಲ್ಲಿಸಲು ಅಥವಾ ತಡೆಯಲು ಹೆಚ್ಚುವರಿ ಅಧಿಕಾರಗಳನ್ನು ಸಹ ಹೊಂದಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವನು ಎಲ್ಲಾ ಯುಕ್ತ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಗತ್ಯವಾದ ಕನಿಷ್ಠ ಬಲಪ್ರಯೋಗ ಮಾಡಬಹುದು.

(6) ನ್ಯಾಯಾಲಯವು ಸಂದರ್ಭಾನುಸಾರ ಅಂಥ ವ್ಯಕ್ತಿಗೆ, ಯಾವುದೇ ಸಂಘಟನೆಯ ಸದಸ್ಯರಿಗೆ ಅಥವಾ ವ್ಯಕ್ತಿಗಳ ಸಂಘದ ಯಾವನೇ ಸದಸ್ಯನಿಗೆ ಈ ಮುಂಚಿತವಾಗಿ ನೋಟೀಸು ನೀಡಿದ್ದ ಹೊರತು ಮತ್ತು ನಿರ್ಬಂಧಕಾಜ್ಞೆಯನ್ನು ಹೊರಡಿಸುವುದರ ವಿರುದ್ಧ ಕಾರಣವನ್ನು ತೋರಿಸುವುದಕ್ಕೆ ಅವನಿಗೆ ಅಥವಾ ಅವುಗಳಿಗೆ ಅವಕಾಶ ನೀಡಿದ್ದ ಹೊರತು, ಯಾವನೇ ವ್ಯಕ್ತಿಯ ಅಥವಾ ಯಾವುದೇ ಸಂಘಟನೆಯ ಅಥವಾ ವ್ಯಕ್ತಿಗಳ ಸಂಘದ ಯಾವನೇ ವ್ಯಕ್ತಿಯ ವಿರುದ್ಧ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದಲ್ಲ:

ಪರಂತು, ಯಾವುದೇ ತುರ್ತು ಸಂದರ್ಭದಲ್ಲಿ, ಈ ಪ್ರಕರಣದ ಮೇರೆಗೆ ಯಾವುದೇ ನೋಟೀಸು ನೀಡದೆ ಮಧ್ಯಂತರ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದಕ್ಕೆ ನ್ಯಾಯಾಲಯವು ಅಧಿಕಾರ ಹೊಂದಿರತಕ್ಕದ್ದು.

(7) ಯಾವ ಪಕ್ಷಕಾರನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೋ ಆ ಪಕ್ಷಕಾರನಿಗೆ ನೋಟೀಸು ನೀಡಿದ ತರುವಾಯ ಮತ್ತು ಅಹವಾಲನ್ನು ಆಲಿಸಿದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ನಿರ್ಬಂಧಕಾಜ್ಞೆಯನ್ನು ಸ್ಥಿರೀಕರಿಸಬಹುದು ಅಥವಾ ತೆರವುಗೊಳಿಸಬಹುದು.

(8) ನ್ಯಾಯಾಲಯವು ತಾನಾಗಿಯೇ ಆಗಲಿ ಅಥವಾ ಯಾವನೇ ಬಾಧಿತ ವ್ಯಕ್ತಿಯ ಅರ್ಜಿಯ ಮೇಲಾಗಲಿ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ನಿರ್ಬಂಧಕಾಜ್ಞೆಯನ್ನು ರದ್ದುಗೊಳಿಸಬಹುದು ಅಥವಾ ಬದಲಾವಣೆ ಮಾಡಬಹುದು.

(9) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿರುವಲ್ಲಿ, ನ್ಯಾಯಾಲಯವು, ಅರ್ಜಿದಾರನಿಗೆ ಖುದ್ದಾಗಿ ಅಥವಾ ವಕೀಲನ ಮೂಲಕ ತನ್ನ ಮುಂದೆ ಹಾಜರಾಗಲು ಅವಕಾಶ ಕೊಡತಕ್ಕದ್ದು ಮತ್ತು ನ್ಯಾಯಾಲಯವು ಅರ್ಜಿದಾರನನ್ನು ವಿಚಾರಣೆ ಮಾಡಿದ ತರುವಾಯ ಅರ್ಜಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಿದರೆ, ಹಾಗೆ ಮಾಡಿದ ಬಗ್ಗೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(10) (1)ನೇ ಉಪಪ್ರಕರಣದ ಮೇರೆಗೆ ತನ್ನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೆಂದು ತಿಳಿದಿರುವ ಯಾವನೇ ವ್ಯಕ್ತಿಯು, ಅಂಥ ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಯಾವ ಮಹಿಳೆಯೂ ಕಾರಾವಾಸದಿಂದ ದಂಡಿತಳಾಗತಕ್ಕದ್ದಲ್ಲ.

**14. ನಿರ್ಬಂಧಕಾಜ್ಞೆಗಳನ್ನು ಉಲ್ಲಂಘಿಸಿ ನೆರವೇರಿಸಿದ ಬಾಲ್ಯ ವಿವಾಹಗಳು ಶೂನ್ಯವಾಗುವುದು.–** 13ನೇ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಮಧ್ಯಂತರ ಅಥವಾ ಅಂತಿಮ ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿ ಶಾಸ್ತ್ರೋಕ್ತವಾಗಿ ನೆರವೇರಿಸಿದ ಯಾವುದೇ ಬಾಲ್ಯ ವಿವಾಹವು ಪ್ರಾರಂಭದಿಂದಲೇ ಶೂನ್ಯವಾಗತಕ್ಕದ್ದು.

**15. ಅಪರಾಧಗಳು ಸಂಜ್ಞೇಯ ಮತ್ತು ಜಾಮಿನುರಹಿತವಾದವುಗಳು ಆಗಿರುವುದು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾದುದು ಮತ್ತು ಜಾಮಿನುರಹಿತವಾದುದು ಆಗಿರತಕ್ಕದ್ದು.

**16. ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಇಡೀ ರಾಜ್ಯಕ್ಕೆ ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅದರ ಭಾಗಕ್ಕೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶ ಅಥವಾ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಬಾಲ್ಯ ವಿವಾಹ ನಿಷೇಧ ಅಧಿಕಾರಿಯೆಂದು ಕರೆಯಲಾಗುವ ಅಧಿಕಾರಿಯನ್ನು ಅಥವಾ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಬಾಲ್ಯ ವಿವಾಹ ನಿಷೇಧ ಅಧಿಕಾರಿಗೆ ನೆರವು ನೀಡಲು, ಸಾಮಾಜಿಕ ಸೇವೆಯ ದಾಖಲೆ ಹೊಂದಿರುವ ಆ ಸ್ಥಳದ ಗೌರವಾನ್ವಿತ ವ್ಯಕ್ತಿಯನ್ನು ಅಥವಾ ಗ್ರಾಮ ಪಂಚಾಯತಿಯ ಅಥವಾ ಪುರಸಭೆಯ ಅಧಿಕಾರಿಯನ್ನು ಅಥವಾ ಸರ್ಕಾರದ ಅಥವಾ ಸಾರ್ವಜನಿಕ ವಲಯ ಉದ್ಯಮದ ಅಧಿಕಾರಿಯನ್ನು ಅಥವಾ ಸರ್ಕಾರೇತರ ಸಂಸ್ಥೆಯ ಪದಾಧಿಕಾರಿಯನ್ನು ಕೋರಬಹುದು ಮತ್ತು ಸಂದರ್ಭಾನುಸಾರ, ಅಂಥ ಸದಸ್ಯನು, ಅಧಿಕಾರಿಯು ಅಥವಾ ಪದಾಧಿಕಾರಿಯು ತದನುಸಾರವಾಗಿ ಕೆಲಸ ಮಾಡಲು ಬದ್ಧನಾಗಿರತಕ್ಕದ್ದು.

(3) ಬಾಲ್ಯ ವಿವಾಹ ನಿಷೇಧ ಅಧಿಕಾರಿಯು,–

(ಎ) ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮವನ್ನು ತೆಗೆದುಕೊಳ್ಳುವುದರ ಮೂಲಕ ಬಾಲ್ಯ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರುವುದನ್ನು ತಡೆಯುವುದು;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಪರಿಣಾಮಕಾರಿ ಪ್ರಾಸಿಕ್ಯೂಷನ್ ಜರುಗಿಸುವ ಬಗ್ಗೆ ಸಾಕ್ಷ್ಯವನ್ನು ಸಂಗ್ರಹಿಸುವುದು;

(ಸಿ) ಬಾಲ್ಯ ವಿವಾಹಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ಉತ್ತೇಜಿಸುವುದರಲ್ಲಿ, ಸಹಾಯ ಮಾಡುವುದರಲ್ಲಿ, ನೆರವು ನೀಡುವುದರಲ್ಲಿ ಅಥವಾ ಅನುಮತಿಸುವುದರಲ್ಲಿ ತೊಡಗಬಾರದೆಂದು ಪ್ರತ್ಯೇಕ ಪ್ರಕರಣಗಳಲ್ಲಿ ಅಥವಾ ಸ್ಥಳೀಯ ನಿವಾಸಿಗಳಿಗೆ ಸಾಮಾನ್ಯವಾಗಿ ಸಲಹೆ ನೀಡುವುದು;

(ಡಿ) ಬಾಲ್ಯ ವಿವಾಹಗಳಿಂದಾಗುವ ಕೆಟ್ಟ ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು;

(ಇ) ಬಾಲ್ಯ ವಿವಾಹಗಳ ಸಮಸ್ಯೆಯ ಬಗ್ಗೆ ಸಮುದಾಯದಲ್ಲಿ ಸಂವೇದನೆಯನ್ನುಂಟು ಮಾಡುವುದು;

(ಎಫ್) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ನಿಯತಕಾಲಿಕ ವಿವರಪಟ್ಟಿಕೆಗಳನ್ನು ಮತ್ತು ಅಂಕಿ ಅಂಶಗಳನ್ನು ಒದಗಿಸುವುದು; ಮತ್ತು

(ಜಿ) ರಾಜ್ಯ ಸರ್ಕಾರವು ಆತನಿಗೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು

– ಆತನ ಕರ್ತವ್ಯವಾಗಿರತಕ್ಕದ್ದು.

(4) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು, ಪೊಲೀಸ್ ಅಧಿಕಾರಿಯ ಅಧಿಕಾರಗಳನ್ನು ಬಾಲ್ಯ ವಿವಾಹ ನಿಷೇಧ ಅಧಿಕಾರಿಯಲ್ಲಿ ನಿಹಿತಗೊಳಿಸಬಹುದು ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ಬಾಲ್ಯ ವಿವಾಹ ನಿಷೇಧ ಅಧಿಕಾರಿಯು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(5) ಬಾಲ್ಯ ವಿವಾಹ ನಿಷೇಧ ಅಧಿಕಾರಿಯು 4, 5 ಮತ್ತು 13ನೇ ಪ್ರಕರಣಗಳ ಮೇರೆಗಿನ ಆದೇಶಕ್ಕಾಗಿ ಮತ್ತು 3ನೇ ಪ್ರಕರಣದ ಮೇರೆಗೆ ಮಗುವಿನೊಂದಿಗೆ ನ್ಯಾಯಾಲಯವನ್ನು ಕೋರುವ ಅಧಿಕಾರವನ್ನು ಹೊಂದಿರತಕ್ಕದ್ದು.

**17. ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳು ಲೋಕನೌಕರರಾಗಿರುವುದು.–** ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳನ್ನು ಭಾರತ ದಂಡ ಸಂಹಿತೆ (1860ರ 45) ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**18. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಬಾಲ್ಯ ವಿವಾಹ ನಿಷೇಧ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**19. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು.

**20. 1955ರ ಅಧಿನಿಯಮ ಸಂಖ್ಯೆ 25ರ ತಿದ್ದುಪಡಿ.–** ಹಿಂದೂ ವಿವಾಹ ಅಧಿನಿಯಮ, 1955ರ 18ನೇ ಪ್ರಕರಣದಲ್ಲಿನ (ಎ) ಖಂಡದ ಬದಲಾಗಿ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎ) 5ನೇ ಪ್ರಕರಣದ (iii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತಿನ ಉಲ್ಲಂಘನೆಯ ಸಂದರ್ಭದಲ್ಲಿ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ;".

**21. ನಿರಸನ ಮತ್ತು ಉಳಿಸುವಿಕೆಗಳು.–** (1) ಶಿಶು ವಿವಾಹ ಪ್ರತಿಬಂಧಕ ಅಧಿನಿಯಮ, 1929ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಈ ಅಧಿನಿಯಮದ ಪ್ರಾರಂಭದಲ್ಲಿ ಸದರಿ ಅಧಿನಿಯಮದ ಮೇರೆಗೆ ಇತ್ಯರ್ಥದಲ್ಲಿರುವ ಅಥವಾ ಮುಂದುವರಿದ ಎಲ್ಲ ಪ್ರಕರಣಗಳನ್ನು ಮತ್ತು ಇತರ ವ್ಯವಹರಣೆಗಳನ್ನು, ಈ ಅಧಿನಿಯಮವನ್ನು ಜಾರಿಗೊಳಿಸದಿದ್ದರೆ ಹೇಗೋ ಹಾಗೆ ನಿರಸನಗೊಂಡ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅವುಗಳನ್ನು ಮುಂದುವರಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

* * * * *

**(Dot – 14.5.10)**